3

**ಮೂಲ ದಾವಾ ನಂ. 81/2017**

**ಮುದ್ದೇಬಿಹಾಳದ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ**

1) ಸಿದ್ದಣ್ಣ ತಂದೆ ಅಮರಪ್ಪ ಮಡಿವಾಳರ ವ ಇನ್ನೊಬ್ಬ ...ವಾದಿಯರು

-ವಿರುದ್ಧ -

1) ಗುರಪ್ಪ ತಂದೆ ಗುರುಬಸಪ್ಪ ಕಂಗಳ ವಗೈರೆ ... ಪ್ರತಿವಾದಿಯರು

===

D.W1
21

## 3ನೇ ಪ್ರತಿವಾದಿಯ ಮುಖ್ಯ ವಿಚಾರಣೆ ಕುರಿತು ಪ್ರಮಾಣ ಪತ್ರ

NOTARY
L. S. METI
MUDDEBIHAL
VIJAYAPUR DISTRICT
KARNATAKA
Reg. No: 12476
Exp. Dt: 10-1-2027
GOVT. OF INDIA

ನಾನು 3ನೇ ಪ್ರತಿವಾದಿ ಈರಣ್ಣ ತಂದೆ ಗುರಪ್ಪ ಕಂಗಳ ವಯಾ: 48ವರ್ಷ ಉದ್ಯೋಗ:ವ್ಯಾಪಾರ ಸಾ: ಗಡಿಸೋಮನಾಳ ತಾ:ತಾಳಿಕೋಟಿ ಪ್ರಮಾಣ ಮಾಡಿ ಹೇಳುವುದೇನೆಂದರೆ..

1) ಈ ದಾವಾದಲ್ಲಿಯ 1ನೇ ಪ್ರತಿವಾದಿ ನನ್ನ ತಂದೆ, 2ನೇ ಪ್ರತಿವಾದಿ ನನ್ನ ತಾಯಿ ಉಳಿದ ಪ್ರತಿವದಿಯರು ನನ್ನ ಸಹೋದರರು ಮತ್ತು ಸಹೋದರಿಯರು ಇರುತ್ತಾರೆ.

2) ದಾವಾದ ಜಮೀನು ಸರ್ವೆ ನಂಬರ 30ಎ ಮತ್ತು 30ಬಿ ಅಂತಾ ಕಾಣಿಸಿದ್ದು ಸಂಪೂರ್ಣ ತಪ್ಪು ಅದೆ. ಆ ರೀತಿ ಸರ್ವೆ ನಂಬರ ಇರುವುದಿಲ್ಲ.

CIR
HB.Y.P

3) ನಿಂಗವ್ವ ಇವರ ಮದುವೆ ಆದ ನಂತರ ನಿಂಗವ್ವ ಮತ್ತು ಆಕೆಯ ಗಂಡ ಕೂಡಿಕೊಂಡು ಗಡಿಸೋಮನಾಳ ಗ್ರಾಮವನ್ನು ಬಿಟ್ಟು ನಿಂಗವ್ವ ಇವಳು ಜಲಪೂರ ಗ್ರಾಮದಲ್ಲಿ ವಾಸವಾಗಿದ್ದರು. ಅನ್ನುವುದು ಸಂಪೂರ್ಣ ಸುಳ್ಳು ಅದೆ. ನಿಂಗವ್ವ ಮತ್ತು ಆಕೆಯ ಗಂಡ ಬಸಪ್ಪ ತಮ್ಮ ಜೀವಿತ ಅವಧಿಯವರೆಗೆ ಗಡಿಸೋಮನಾಳ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಅವರು ಎಂದೂ ಜಲಪೂರ ಗ್ರಾಮದಲ್ಲಿ ವಾಸವಾಗಿರುವುದಿಲ್ಲ. ನಿಂಗವ್ವ ಮತ್ತು ಆಕೆಯ ಗಂಡ ಬಸಪ್ಪನ ತಾಯಿ ಮಡಿವಾಳವ್ವ ಕೂಡಿಕೊಂಡು ಸರ್ವೆ ನಂಬರ 30 ಕ್ಷೇತ್ರ 21 ಎಕರೆ 16 ಗುಂಟೆ ಈ ಜಮೀನದ ಪೈಕಿ ದಕ್ಷಿಣ ಭಾಗದ 8 ಎಕರೆ ಜಮೀನವನ್ನು ಮತ್ತು ಸದರಿ 8 ಎಕರೆ ಜಮೀನಕ್ಕೆ ಹೊಂದಿ ಉತ್ತರ ಭಾಗದ 4 ಎಕರೆ ಜಮೀನವನ್ನು ಹೀಗೆ ಒಟ್ಟು 12 ಎಕರೆ ಜಮೀನವನ್ನು ಮಾತ್ರ ಖರೀದಿ ಮಾಡಿರುತ್ತಾರೆ. ಬಾಕಿ ಉಳಿದ 09 ಎಕರೆ 16 ಗುಂಟೆ ಜಮೀನವನ್ನು ಸಂಗನಗೌಡ ಕೋಟಿಖಾನೆ ಇವರು ಖರೀಸಿದ್ದಾರೆ. ಆದರೆ ವಾದಿಯರು ಹೇಳುವ ಹಾಗೆ ನಿಂಗವ್ವ ಸರ್ವೆ ನಂಬರ 30 ಈ

NO. OF CORRECTIONS
23/8/2026
L. S. METI
NOTARY
MUDDEBIHAL. DIST: VIJAYAPUR

ಜಮೀನದ ಪೂರ್ಣ ಕ್ಷೇತ್ರವನ್ನು ಖರೀದಿ ಮಾಡಿರುವುದಿಲ್ಲ. ನಿಂಗವ್ವ ಮತ್ತು ಮಡಿವಾಳವ್ವ ಕೂಡಿ ಸದರ ಜಮೀವನ್ನು ಖರೀದಿ ಮಾಡಿದರೂ ಕೂಡಾ ನಿಂಗವ್ವಳ ಹೆಸರಲೇ ಮಾತ್ರ ಖರೀದಿ ಪತ್ರ ನೋಂದಾಯಿಸಿಕೊಂಡಿರುತ್ತಾರೆ. ಸದರಿ ಜಮೀನು ನಿಂಗವ್ವಳ ಸಂಪೂರ್ಣ ಮಾಲ್ಕಿಯದು ಇರುವುದಿಲ್ಲ. ದಾವಾದ ಸರ್ವೆ ನಂಬರಗಳು ಸಂಪೂರ್ಣ ತಪ್ಪು ಇರುತ್ತವೆ. ಸದರಿ 12 ಎಕರೆ ಜಮೀನದ ಸರ್ವೆ ನಂಬರ 30/2 ಇರುತ್ತದೆ.

4) ಈ ಮೇಲೆ ಹೇಳಿದಂತೆ ಸದರಿ 12 ಎಕರೆ ಜಮೀನು ನಿಂಗವ್ವ ಮತ್ತು ಮಡಿವಾಳವ್ವ ಕೂಡಿ ಖರೀದಿ ಮಾಡಿದ್ದರಿಂದ, ಸದರಿ ಜಮೀನು ನಿಂಗವ್ವಳ ಸ್ವಯಾರ್ಜಿತ ಆಸ್ತಿ ಇರುವುದಿಲ್ಲ. ನಿಂಗವ್ವ ಇವರು ದಿನಾಂಕ 14-5-1971 ರಂದು ರಾಯಚೂರ ಜಿಲ್ಲೆಯ ಮಕಣಾಪೂರ ಗ್ರಾಮದಲ್ಲಿ ಮೋಟಾರು ಅಪಘಾತದಲ್ಲಿ ಮರಣ ಹೊಂದಿರುತ್ತಾಳೆ. ನಿಂಗವ್ವ ಮರಣ ಹೊಂದಿದ ನಂತರ ಸದರ ಜಮೀನಕ್ಕೆ ವಾದಿಯರು ಕಾನೂನು ಪ್ರಕಾರ ವಾರಸುದಾರರು ಆಗುವುದಿಲ್ಲ. ನಿಂಗವ್ವ ಮರಣ ಹೊಂದಿದ ನಂತರ ಸದರ ಜಮೀನಕ್ಕೆ ಆಕೆಯ ಗಂಡ ಕಾನೂನು ಪ್ರಕಾರ ವಾರಸುದಾರು ಇರುತ್ತಾನೆ. ಆ ಪ್ರಕಾರ ಸದರಿ ಜಮೀನಕ್ಕೆ ನಿಂಗವ್ವ ಇವಳ ಗಂಡ ಬಸಪ್ಪನು ಕಂದಾಯ ಅಧಿಕಾರಿಗಳಿಗೆ ವರ್ದಿ ಕೊಟ್ಟು ತನ್ನ ಹೆಸರು ವಾರಸಾ ದಾಖಲ ಮಾಡಿಸಿಕೊಂಡಿರುತ್ತಾನೆ. ಆ ಪ್ರಕಾರ ಸದರಿ ಜಮೀನಕ್ಕೆ ಬಸಪ್ಪನು ಸಂಪೂರ್ಣ ಮಾಲಿಕನು ಇರುತ್ತಾನೆ.

5) ವಾದಿಯರು ವಂಶಾವಳಿಯಲ್ಲಿ ನಿಂಗವ್ವ ಇವಳ ತಮ್ಮನ ಹೆಸರು ಮಡೆಪ್ಪ ಅಂತಾ ತೋರಿಸಿದ್ದು ಅದೆ. ಅವನ ಹೆಸರು ಮಡಿವಾಳಪ್ಪ ಅಂತಾ ಇರುತ್ತದೆ. ಅಲ್ಲದೆ ಅವನಿಗೆ ಮದುವೆ ಆಗಿದ್ದಿಲ್ಲ ಅಂತಾ ಕಾಣಿಸಿದ್ದು ಕೂಡಾ ತಪ್ಪು ಅದೆ. ಅವನಿಗೆ ಮದುವೆಯಾಗಿದ್ದು ಅವನಿಗೆ ಮಕ್ಕಳು ಕೂಡಾ ಇರುತ್ತಾರೆ.

ವಾದಿಯರು ಇನ್ನೊಂದು ವಂಶಾವಳಿಯಲ್ಲಿ ಬಸಪ್ಪನು ದಿನಾಂಕ 20-10-1972 ರಂದು ಮರಣ ಹೊಂದಿರುತ್ತನೆ. ಅಂತಾ ಕಾಣಿಸಿದ್ದು ಸಂಪೂರ್ಣ ತಪ್ಪು ಅದೆ. ಬಸಪ್ಪನು ಅವನ ಹೆಂಡತಿ ಮರಣ ಹೊಂದಿದ 4 ವರ್ಷದ ನಂತರ ಅಂದರೆ 1975 ರಲ್ಲಿ ಮರಣ ಹೊಂದಿರುತ್ತಾನೆ. ಅದೇ ರೀತಿ ನಿಂಗವ್ವ ಇವಳು ದಿನಾಂಕ 22-5-1971ರಂದು ಮರಣ ಹೊಂದಿರುತ್ತಾಳೆ ಅಂತಾ ಕಾಣಿಸಿದ್ದು ಸಂಪೂರ್ಣ ತಪ್ಪು ಅದೆ. ನಿಂಗವ್ವ ಇವಳು ದಿನಾಂಕ 14-5-1971 ರಂದು ಮರಣ ಹೊಂದಿರುತ್ತಾಳೆ.

6) ನಿಂಗವ್ವಳ ಗಂಡ ಬಸಪ್ಪನು 1966-67 ರ ಪೂರ್ವದಲ್ಲಿಯೇ ಸೆರೆ ಕುಡಿತದ

NOTARY
L. S. METI
MUDDEBIHAL
VIJAYAPUR DISTRICT
KARNATAKA
Reg. No: 12476
GOVT. OF INDIA

NO. OF CORRECTIONS
L. S. METI
NOTARY
MUDDEBIHAL. DIST: VIJAYAPUR

ಚಟಕ್ಕೆ ಅಂಟಿಕೊಂಡಿದ್ದನು. ಆ ಕಾರಣದಿಂದಲೇ ಮೇಲೆ ಹೇಳಿದ 12 ಎಕರೆ ಜಮೀನದ ಖರೀದಿ ಪತ್ರವನ್ನು ನಿಂಗವ್ವ ಇವಳ ಹೆಸರಿಗೆ ನೊಂದಾಯಿಸಿಕೊಂಡಿದ್ದು ಅದೆ.

7) ನಿಂಗವ್ವ ಇವಳು ದಿನಾಂಕ 22–5–1971 ರಂದು ಜಲಪೂರ ಗ್ರಾಮದಲ್ಲಿ ಅಪಘಾತದಿಂದ ಮರಣ ಹೊಂದಿರುತ್ತಾಳೆ ಅಂತಾ ಕಾಣಿಸಿದ್ದು ಸಂಪೂರ್ಣ ಸುಳ್ಳು ಅದೆ. ನಿಂಗವ್ವ ಇವರು ರಾಯಚೂರ ಜಿಲ್ಲೆಯ ಮಕಣಾಪೂರ ಗ್ರಾಮದಲ್ಲಿ ಅಪಘಾತದಲ್ಲಿ ದಿನಾಂಕ 14–5–1971 ರಂದು ಮರಣ ಹೊಂದಿದ ಬಗ್ಗೆ ನಿಂಗವ್ವ ಇವಳ ಗಂಡ ಬಸಪ್ಪನು ಕಂದಾಯ ಅಧಿಕಾರಿಗಳಿಗೆ ವರದಿ ಕೊಟ್ಟು ನಿಂಗವ್ವ ಇವಳ ಹೆಸರಿನಲ್ಲಿ ಇರುವ ಸರ್ವೆ ನಂಬರ 30/2 ಈ ಜಮೀನಕ್ಕೆ ವಾರಸಾ ದಾಖಲ ಮಾಡಿಸಿಕೊಂಡಿದ್ದಾನೆ. ನಿಂಗವ್ವ ಮರಣ ಹೊಂದಿದ ನಂತರ ಆಕೆಯ ಗಂಡ ಬಸಪ್ಪನು ಸೆರೆ ಕುಡಿತಕ್ಕೆ ಅಧಿನನಾಗಿ ಕರಳು ಬೇನೆಯಿಂದ ಹಾಸಿಗೆ ಹಿಡಿದಿದ್ದು ಮತ್ತು ನಿಂಗವ್ವ ಮರಣ ಹೊಂದಿದ ನಂತರ ಈ ದಾವಾದ 1ನೇ ವಾದಿ ಬಸಪ್ಪನನ್ನು ತನ್ನ ಮನೆಯಲ್ಲಿಟ್ಟುಕೊಂಡು ಅವನನ್ನು ನೋಡಿಕೊಳ್ಳುತ್ತಿದ್ದು, ಹಾಗೂ ಬಸಪ್ಪನು ದಿನಾಂಕ 21–10–1972 ರಂದು ಜಲಪೂರ ಗ್ರಾಮದಲ್ಲಿ ಮರಣ ಹೊಂದಿದನು ಅಂತಾ ಕಾಣಿಸಿದ್ದು ಸಂಪೂರ್ಣ ಸುಳ್ಳು ಅದೆ. 1975 ರಲ್ಲಿ ಬಸಪ್ಪನು ಮರಣ ಹೊಂದಿರುತ್ತಾನೆ. ವಾದಿಯರು ತಮ್ಮ ಅನುಕೂಲಕ್ಕಾಗಿ ನಿಂಗವ್ವ ಮತ್ತು ಬಸಪ್ಪ ಇವರ ಮರಣದ ದಿನಾಂಕದ ಬಗ್ಗೆ ನ್ಯಾಯಾಲಯಕ್ಕೆ ಸುಳ್ಳು ಅರ್ಜಿಗಳನ್ನು ಸಲ್ಲಿಸಿ ಆದೇಶವನ್ನು ಪಡೆದುಕೊಂಡಿದ್ದು ದಾಖಲೆಗಳಿಂದಿ ಕಂಡು ಬರುತ್ತದೆ.

8) 1959–60 ರಿಂದ ನಿಂಗವ್ವ ಇವಳ ಜೀವಿತ ಅವಧಿಯವರೆಗೆ 1 ಮತ್ತು 2ನೇ ಪ್ರತಿವಾದಿಯರು ದಾವಾದ ಜಮೀನುಗಳನ್ನು ಬೆಳೆ ಹಿಸ್ಸಾದ ಮೇಲೆ ಸಾಗುವಳಿ ಮಾಡುತ್ತಿದ್ದರು ಅನ್ನುವುದು ಸಂಪೂರ್ಣ ಸುಳ್ಳು ಅದೆ. ನಿಂಗವ್ವ ಮತ್ತು ಬಸಪ್ಪ ಮರಣ ಹೊಂದಿದ ನಂತರ ಕೂಡಾ ವಾದಿಯರಿಗೆ ಮತ್ತು 1–2 ಪ್ರತಿವಾದಿಯರಿಗೆ ಒಳ್ಳೆಯ ಸಂಬಂಧ ಇದ್ದುದರಿಂದ 1 ಮತ್ತು 2ನೇ ಪ್ರತಿವಾದಿಯರು ದಾವಾದ ಜಮೀನುಗಳನ್ನು ಬೆಳೆ ಹಿಸ್ಸಾದ ಪ್ರಕಾರ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಅನ್ನುವುದು ಹಾಗೂ ವಾದಿಯರು ತಮ್ಮ ಭಾಗದ ಬೆಳೆಯನ್ನು ತೆಗೆದುಕೊಂಡು ಹೋಗುತ್ತಾ ಬಂದಿರುತ್ತಾರೆ ಅನ್ನುವುದು ಸಂಪುರ್ಣ ಸುಳ್ಳು ಅದೆ. ವಾದಿಯರು ಇಂದಿನವರೆಗೆ ನಮಗೆ ಪರಿಚಯ ಇರುವುದಿಲ್ಲ. ಹೀಗಿರುವಾಗ 1 ಮತ್ತು 2ನೇ ಪ್ರತಿವಾದಿಯರು ವಾದಿಯರ ಪರವಾಗಿ ಬೆಳೆ ಹಿಸ್ಸಾದ ಮೇಲೆ ದಾವಾದ ಜಮೀನುಗಳನ್ನು ಸಾಗುವಳಿ ಮಾಡುವ ಪ್ರಶ್ನೆಯೇ ಮತ್ತು ವಾದಿಯರು ತಮ್ಮ ಭಾಗದ ಬೆಳೆಯನ್ನು ತೆಗೆದುಕೊಂಡು ಹೊಗುವ ಪ್ರಶ್ನೆಯೇ ಉಂಟಾಗುವುದಿಲ್ಲ.

NOTARY
L. S. METI
MUDDEBIHAL
VIJAYAPUR DISTRICT
KARNATAKA
Reg. No: 12476
Exp. Dt: 10-1-2027
GOVT. OF INDIA

NO. OF CORRECTIONS
L. S. METI
NOTARY
MUDDEBIHAL. DIST: VIJAYAPUR

9) ನಿಂಗವ್ವ ಮತ್ತು ಬಸಪ್ಪ ಇವರು ಮರಣ ಹೊಂದಿದ ನಂತರ ನಾವು ವಾದಿಯರಿಗೆ ಬೆಳೆಯಲ್ಲಿ ಪಾಲನ್ನು ಕೊಡುತ್ತಿದ್ದೆವು ಅನ್ನುವರು. ಆ ಕಾರಣದಿಂದ ದಾವಾದ ಆಸ್ತಿಗಳ ಕಂದಾಯ ದಾಖಲೆಗಳನ್ನು ಪರಿಶಿಲಿಸುವ ಅವಕಾಶವೇ ಉಂಟಾಗಲಿಲ್ಲ ಅನ್ನುವುದು, 2015 ಡಿಶೆಂಬರದಲ್ಲಿ ನಾವು ದಾವಾದ ಅಸ್ತಿಗಳನ್ನು ನಾವು ಖರೀದಿ ಮಾಡಿದ್ದರಿಂದ ಮತ್ತು ನಾವು ದಾವಾದ ಆಸ್ತಿಗಳ ಮಾಲಿಕರು ಇರುವುದರಿಂದ ವಾದಿಯರಿಗೆ ಬೆಳೆ ಪಾಲನ್ನು ಕೊಡುವುದಿಲ್ಲವಾಗಿ ಅನ್ನುವುದು ಆ ನಂತರ ವಾದಿಯರು ಕಂದಾಯ ದಾಖಲೆಗಳನ್ನು ತೆಗೆದುಕೊಂಡು ನೋಡಲಾಗಿ, ನಮ್ಮ ಹೆಸರು ಕಂಡು ಬಂದಿತು ಅನ್ನುವುದು, ವಾದಿಯರ ಸದರಿ ವಿಷಯವನ್ನು ಗ್ರಾಮದ ಹಿರಿಯರ ಮುಂದೆ ತರಲಾಗಿ ನಾವು ದಾವಾದ ಆಸ್ತಿಗಳ ಕಬ್ಜಾ ವಾದಿಯರಿಗೆ ಕೊಡಲಿಕ್ಕೆ ಮತ್ತು ನಾವು ಖೊಟ್ಟಿ ಖರೀದಿ ಪತ್ರದ ಆಧಾರದ ಮೇಲೆ ದಾವಾದ ಆಸ್ತಿಗಳಿಗೆ ನಮ್ಮ ಹೆಸರಿಗೆ ದಾಖಲ ಮಾಡಿಕೊಂಡು ಕಂದಾಯ ದಾಖಲೆಗಳನ್ನು ರದ್ದುಪಡಿಸುವುದಾಗಿ ಒಪ್ಪಿಕೊಂಡರು ಅನ್ನುವುದು, ನಾವು ನಿಂಗವ್ವ ಇವಳಿಗೆ ಮಕ್ಕಳು ಇಲ್ಲದಿರುವ ದುರುಪಯೋಗ ತೆಗೆದುಕೊಂಡು ದಾವಾದ ಆಸ್ತಿಗಳ ಬಗ್ಗೆ ಖೊಟ್ಟಿ ಖರೀದಿ ಪತ್ರ ಸೃಷ್ಟಿಸಿ ಕಂದಾಯ ದಾಖಲೆಗಳಲ್ಲಿ ತಮ್ಮ ಹೆಸರನ್ನು ದಾಖಲ ಮಾಡಿಸಿಕೊಂಡಿದ್ದೇವೆ ಅನ್ನುವುದು ಸಂಪೂರ್ಣ ಸುಳ್ಳು ಮತ್ತು ಸತ್ಯಕ್ಕೆ ದೂರವಾದದ್ದು ಇರುತ್ತದೆ.

10) ಬಸಪ್ಪ ತಂದೆ ಚಂದಪ್ಪ ಅಗಸರ ಇವರು ದಾವಾದ ಆಸ್ತಿಗಳ ಬಗ್ಗೆ 1-2 ಪ್ರತಿವಾದಿಯರಿಗೆ ಖರೀದಿ ಪತ್ರ ಬರೆದುಕೊಟ್ಟಿರುವುದಿಲ್ಲ ಅನ್ನುವುದು ಬಸಪ್ಪ ಸತ್ತ ನಂತರ ನಾವು ದಾವಾದ ಆಸ್ತಿಗಳ ಕುರಿತು ಖೊಟ್ಟಿ ಖರೀದಿ ಪತ್ರ ಸೃಷ್ಟಿ ಮಾಡಿದ್ದೇವೆ ಅನ್ನುವುದು, ನಾವು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮತ್ತು ನಮ್ಮ ಸಂಬಂಧಿಕನಾದ ದಸ್ತು ಬರಹಗಾರರಾದ ಕಡಿ ಇವರೊಂದಿಗೆ ಶಾಮಿಲಾಗಿ, ಖೊಟ್ಟಿ ಖರೀದಿ ಪತ್ರವನ್ನು ಸೃಷ್ಟಿ ಮಾಡಿದ್ದರಿಂದ ಅವು ಬೇಕಾಯದೆಶೀರ ಇದ್ದುದರಿಂದ, ನಮಗೆ ಯಾವುದೇ ರೀತಿಯ ಹಕ್ಕು ಮಾಲ್ಕಿ, ಮತ್ತು ಹಿತಾಸಕ್ತಿ ಪ್ರಾಪ್ತವಾಗಲಾರದು ಅನ್ನುವುದು, ಅಲ್ಲದೆ ಸದರಿ ಖರೀದಿ ಪತ್ರಗಳು ವಾದಿಯರ ಮೇಲೆ ಬಂಧನಕಾರಕ ಇರುವುದಿಲ್ಲ ಅನ್ನುವುದು ಸಂಪೂರ್ಣ ಸುಳ್ಳು ಮತ್ತು ಸತ್ಯಕ್ಕೆ ದೂರವಾದದ್ದು ಇರುತ್ತದೆ.

11) ವಾದಿಯರು ದಿನಾಂಕ 2-1-2017 ರಂದು ದಾವಾದ ಆಸ್ತಿಗಳಿಗೆ ಬಂದಾಗ ನಾವು ಕಂದಾಯ ದಾಖಲೆಗಳಲ್ಲಿ ನಮ್ಮ ಹೆಸರು ಇರುವುದನ್ನು ತೋರಿಸಿದ ವಾದಿಯರಿಗೆ

NO. OF CORRECTIONS

L. S. METI
NOTARY
MUDDEBIHAL. DIST: VIJAYAPUR

ಅವಾಚ್ಯ ಶಬ್ದಗಳಿಂದ ಬೈದೆವು ಮತ್ತು ಜೀವದ ಬೆದರಿಕೆ ಹಾಕಿದೆವು ಅನ್ನುವುದು ಸಂಪೂರ್ಣ ಸುಳ್ಳು ಅದೆ.

12) <u>ನಿಜಸಂಗತಿ</u> : ಗಡಿಸೋಮನಾಳ ಗ್ರಾಮದ ಸರ್ವೆ ನಂಬರ 30/2 ಕ್ಷೇತ್ರ 12 ಎಕರೆ ಈ ಜಮೀನದ ಮಾಲಿಕಳಾದ ನಿಂಗವ್ವ ಇವಳು ದಿನಾಂಕ 14-5-1971 ರಂದು ಮರಣ ಹೊಂದಿದ ನಂತರ ಆಕೆಯ ಗಂಡನಾದ ಬಸಪ್ಪನು ತನ್ನ ಹೆಸರಿಗೆ ವಾರಸಾ ಮಾಡಿಕೊಂಡಿರುತ್ತಾನೆ. ಆ ನಂತರ ಬಸಪ್ಪನು ಸದರ ಜಮೀನದ ಪೈಕಿ ಪಶ್ಚಿಮ ಭಾಗದ 06 ಎಕರೆ ಜಮೀನವನ್ನು 1-2ನೇ ಪ್ರತಿವಾದಿಯರಿಗೆ ಮಾರಾಟ ಮಾಡಿ ದಿನಾಂಕ 13-4-1972 ರಂದು 2ನೇ ಪ್ರತಿವಾದಿಯ ಹೆಸರಿಗೆ ಖರೀದಿ ಪತ್ರ ನೋಂದಾಯಿಸಿ ಕೊಟ್ಟಿರುತ್ತಾನೆ. ಆ ನಂತರ ಸದರಿ ಬಸಪ್ಪನು ತನಗೆ ಉಳಿದ ಸರ್ವೆ ನಂಬರ 30/2ಬ ಕ್ಷೇತ್ರ 06 ಎಕರೆ ಜಮೀನದ ಪೈಕಿ ಪಶ್ಚಿಮ ಭಾಗದ 02 ಎಕರೆ ಜಮೀನವನ್ನು 1 ಮತ್ತು 2 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿ ದಿನಾಂಕ 15-5-1973 ರಂದು 2ನೇ ಪ್ರತಿವಾದಿಯರ ಹೆಸರಿಗೆ ಖರೀದಿ ಪತ್ರ ನೋಂದಾಯಿಸಿಕೊಟ್ಟಿರುತ್ತಾನೆ. ಆ ನಂತರ ಸದರ ಬಸಪ್ಪನು ತನಗೆ ಉಳಿದ ಸರ್ವೆ ನಂಬರ 30/2ಬ, ಕ್ಷೇತ್ರ 4 ಎಕರೆ ಜಮೀನವನ್ನು 1 ಮತ್ತು 2ನೇ ಪ್ರತಿವಾದಿಯರಿಂದ 600-00 ರೂಪಾಯಿ ಅಗಾವ ಲಾವಣಿ ಪಡೆದುಕೊಂಡು 1973-1985 ರವರೆಗೆ 12 ವರ್ಷಗಳವರೆಗೆ ಉಂಡು ಬಿಡಲು ಹಾಕಿ ಆ ಬಗೆ ಕಂದಾಯ ಅಧಿಕಾರಿಗಳ ಕಡೆಗೆ ದಿನಂಕ 15-12-1973 ರಂದು ಅರ್ಜಿ ಸಲ್ಲಿಸಿ 2ನೇ ಪ್ರತಿವಾದಿಯರ ಹೆಸರು ದಾಖಲ ಮಾಡಿಸಿದ್ದಾನೆ. ಬಸಪ್ಪ ಸದರಿ ಲಾವಣಿ ಹಾಕಿದ ಸುಮಾರು 8 ತಿಂಗಳ ನಂತರ ಸದರಿ ಜಮೀನವನ್ನು 1-2 ಪ್ರತಿವಾದಿಯರಿಗೆ ಮಾರಾಟ ಮಾಡಿ ದಿನಾಂಕ 27-8-1974 ರಂದು 1ನೇ ಪ್ರತಿವಾದಿ ಹೆಸರಿಗೆ ಖರೀದಿ ಪತ್ರವನ್ನು ನೋಂದಾಯಿಸಿಕೊಟ್ಟಿರುತ್ತಾನೆ. ಸದರಿ ಖರೀದಿ ಪ್ರಕಾರ 1 ಮತ್ತು 2ನೇ ಪ್ರತಿವಾದಿಯರು ದಾವಾದ ಜಮೀನುಗಳಿಗೆ ಸಂಪೂರ್ಣ ಮಾಲಿಕರು ಮತ್ತು ಹಕ್ಕುದಾರರು ಆಗಿರುತ್ತಾರೆ. ಸದರಿ ಖರೀದಿ ದಿನಾಂಕದಿಂದ 1 ಮತ್ತು 2ನೇ ಪ್ರತಿವಾದಿಯರು ಸದರಿ ಜಮೀನುಗಳನ್ನು ತಮ್ಮ ಪ್ರತ್ಯೇಕ ಕಬ್ಜಾದಲ್ಲಿಟ್ಟುಕೊಂಡು ವಹಿವಾಟು ಉಪಭೋಗ ಮಾಡುತ್ತಾ ಬಂದಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಯರು ದಾವಾದ ಜಮೀನುಳಿಗೆ ತಮ್ಮ ಮಕ್ಕಳಾದ 3 ಮತ್ತು 4ನೇ ಪ್ರತಿವಾದಿಯರಿಗೆ ವಾಟ್ನಿ ಮಾಡಿಕೊಟ್ಟಿದ್ದಾರೆ.

13) ಈ ಮೊದಲು ಬಸಪ್ಪ ತಂದೆ ಚಂದಪ್ಪ ಅಗಸರ ಇವರ ಮಲತಮ್ಮನಾದ ಮಲಕಪ್ಪ ಚಂದಪ್ಪ ಅಗಸರ ಇವರು ಕೂಡಾ ದಾವಾದ ಜಮೀನುಗಳಿಗೆ ಸಂಬಂಧಿಸಿದಂತೆ 1

NOTARY L. S. METI MUDDEBIHAL VIJAYAPUR DISTRICT KARNATAKA Reg. No: 12476 Exp. Dt: 10-1-2027 GOVT. OF INDIA

NO. OF CORRECTIONS
L. S. METI
NOTARY
MUDDEBIHAL. DIST: VIJAYAPUR

ಮತ್ತು 2ನೇ ಪ್ರತಿವಾದಿಯರ ಹೆಸರಿನಲ್ಲಿ ಇರುವ ದಾಖಲೆಗಳನ್ನು ರದ್ದುಪಡಿಸಿಕೊಳ್ಳಲು ಮತ್ತು ಸದರ ಜಮೀನುಗಳಿಗೆ ತನ್ನ ಹೆಸರು ದಾಖಲಿಸುವ ಕುರಿತು ಕಂದಾಯ ಅಧಿಕಾರಿಗಳ ಮೇಲೆ ಮ್ಯಾಂಡೇಟರಿ ತಾಕೀದಿ ಪಡೆದುಕೊಳ್ಳಲು ಮತ್ತು ಸದರಿ ಜಮೀನುಗಳ ಅವನ ಕಬ್ಜಾ ವಹಿವಾಟಕ್ಕೆ 1 ಮತ್ತು 2ನೇ ಪ್ರತಿವದಿಯರು ಹರಕತ ವಗೈರೆ ಮಾಡದಂತೆ ನಿರಂತರ ತಾಕೀದಿ ಪಡೆಯುವ ಕುರಿತು ಮುದ್ದೇಬಿಹಾಳ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೂಲ ದಾವಾ ನಂಬರ 43/2013 ನೇದ್ದನ್ನು ದಾಖಲ ಮಾಡಿದ್ದನು. ಸದರಿ ದಾವೆಯಲ್ಲಿ 1 ಮತ್ತು 2ನೇ ಪ್ರತಿವಾದಿಯರು ಈ ಮೇಲೆ ಹೇಳಿದ ವಿಷಯದ ಬಗ್ಗೆ ವಿವರವಾದ ಲಿಖಿತ ಹೇಳಿಕೆ ಸಲ್ಲಿಸಿದ್ದರು. ಸದರಿ ದಾವೆಯನ್ನು ವಾದಿಯ ವಿಚಾರಣೆ ಮಾಡಿಕೊಳ್ಳದೇ ಇರುವುದರಿಂದ ಸದರಿ ದಾವೆಯನ್ನು ನ್ಯಾಯಾಲಯದವರು ದಿನಾಂಕ 30–09–2015 ರಂದು ವಜಾ ಮಾಡಿರುತ್ತಾರೆ.

14) ಈ ಮೇಲೆ ಹೇಳಿದಂತೆ ದಾವಾದ ಜಮೀನುಗಳಿಗೆ ನಾವು ಸಂಪೂರ್ಣ ಮಾಲಿಕರು ಇರುವಾಗ, ದಾವಾದ ಜಮೀನುಗಳಿಗೆ ವಾದಿಯರಿಗೆ ಯಾವುದೇ ರೀತಿಯ ಹಕ್ಕು ಮಾಲ್ಕಿ ಮತ್ತು ಹಿತಸಂಬಂಧ ಉಂಟಾಗಲಾರದು. ಅಲ್ಲದೆ ದಾವಾದ ಜಮೀನುಗಳು ಎಂದೂ ವಾದಿಯರ ಪ್ರತ್ಯಕ್ಷ ಕಬ್ಜಾ ವಹಿವಾಟಿಯಲ್ಲಿ ಕೂಡಾ ಇರುವುದಿಲ್ಲ. ವಾದಿಯರು ಹೇಗಾದರೂ ಮಾಡಿ ದಾವಾದ ಜಮೀನುಗಳನ್ನು ಪಡೆಯಬೇಕೆಂಬ ದುಷ್ಟ ಉದ್ದೇಶದಿಂದ ಮತ್ತು ನಮಗೆ ತೊಂದರೆ ಮತ್ತು ಹಾನಿ ಮಾಡುವ ಉದ್ದೇಶದಿಂದ ಈ ಸುಳ್ಳ ಮಜಕೂರಿನ ದಾವೆಯನ್ನು ಮಾಡಿರುತ್ತಾರೆ.

15) ಈ ಮೇಲೆ ಹೇಳಿದ ಕಾರಣಗಳ ಮೂಲಕ ವಾದಿಯರಿಗೆ ಈ ದಾವಾ ಮಾಡಲಿಕ್ಕೆ ಕಾರಣವೇ ಉಂಟಾಗುವುದಿಲ್ಲ. ಅಲ್ಲದೆ ವಾದಿಯರಿಗೆ ದಾವಾದಲ್ಲಿ ಕಾಣಿಸಿದ ಮಾಗಣಿಗಳನ್ನು ಕಾನೂನು ಪ್ರಕಾರ ಪಡೆಯಲು ಬರಲಾರದು. 1–2ನೇ ಪ್ರತಿವಾದಿಯರು ದಾವಾದ ಜಮೀನುಗಳನ್ನು 1972,73,74 ರಲ್ಲಿ ಖರೀದಿ ಮಾಡಿದ್ದರಿಂದ ವಾದಿಯರ ಈ ದಾವಾ ಕಾಲಮಿತಿ ಮೀರಿದ್ದು ಇರುತ್ತದೆ.

16) ವಾದಿಯರು ದಾವಾದ ಆಸ್ತಿಗಳ ಬಗ್ಗೆ ಸರಿಯಾದ ಕಿಮ್ಮತ್ತು ಮಾಡಿಲ್ಲ. ಮತ್ತು ಸರಿಯಾದ ಕೋರ್ಟ ಫೀ ತುಂಬಿರುವುದಿಲ್ಲ. ದಾವಾದ ಜಮೀನುಗಳು ಗಡಿಸೋಮನಾಳ ಗ್ರಾಮಕ್ಕೆ ಹೊಂದಿಕೊಂಡು ಇದ್ದು, ಅದರಲ್ಲಿ ಪ್ಲಾಟುಗಳು ಆಗುತ್ತವೆ. ಅದ್ದರಿಂದ ದಾವಾದ ಜಮೀನುಗಳ ಕಿಮ್ಮತ್ತು ಪ್ರತಿ ಎಕರೆಗೆ 10,00,000/– ರೂ.ದಂತೆ 1,20,00,000–00

NO. OF CORRECTIONS
L. S. METI
NOTARY
MUDDEBIHAL. DIST: VIJAYAPUR

ಆಗುತ್ತದೆ. ವಾದಿಯರು ಸದರಿ ಕಿಮ್ಮತ್ತಿನ ಮೇಲೆ ಕೋರ್ಟ ಫೀ ತುಂಬಬೇಕಾಗುತ್ತದೆ. ಈ ಬಗ್ಗೆ ಮುದ್ದೆ ತೆಗೆಯಬೇಕು.

17) ವಾದಿಯರಿಗೆ ಈ ಮೇಲೆ ಹೇಳಿದ ಯಾವತ್ತೂ ವಿಷಯ ತಿಳಿದಾಗಲೂ ಕೂಡಾ ವಾದಿಯರು ಈ ಸುಳ್ಳು ಮಜಕಜುರಿನ ದಾವೆಯನ್ನು ಮಾಡಿ, ವಯಸ್ಸಾದ 1 ಮತ್ತು 2ನೇ ಪ್ರತಿವಾದಿಯರಿಗೆ ಮಾನಸಿಕ ನೆಮ್ಮದಿಯನ್ನು ಹಾಳು ಮಾಡಿರುತ್ತಾರೆ. ಅಲ್ಲದೆ ನಮಗೆ ವಿನಾಕಾರಣ ನ್ಯಾಯಾಲಯಕ್ಕೆ ಅಲೆದಾಡುವಂತೆ ಮಾಡಿ ಖರ್ಚಿಗೀಡು ಮಾಡಿರುತ್ತಾರೆ. ಕಾರಣ ನಮಗೆ ವಾದಿಯರಿಂದ 1,00,000/- ಪರಿಹಾರ್ಥ ಖರ್ಚು ಕೊಡಿಸಬೇಕು. ಅಂತೂ ಕಾರಣಗಳನ್ನು ಪರಾಮರ್ಶಿಸಿ ವಾದಿಯರ ದಾವೆಯನ್ನು ಖರ್ಚು ಸಹಿತವಾಗಿ ವಜಾ ಮಾಡಬೇಕಾಗಿ ವಿನಂತಿ.

ಈ ಮೇಲೆ ಬರೆದ ಯಾವತ್ತೂ ಮಜಕೂರುಗಳು ನನ್ನ ಸ್ವಂತ ಮಾಹಿತಿ ವ, ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಹೇಳಿ ಬರೆಯಿಸಿದ್ದು ನಿಜವಿರುತ್ತವೆ

ಮುದ್ದೇಬಿಹಾಳ
ದಿನಾಂಕ : 23-03-2026

ಪ್ರಮಾಣೀಕರ್ತ

ಈ ಪ್ರಮಾಣೀಕರ್ತನ ಪರಿಚಯ ನನಗಿದೆ.

ವ್ಹಿ.ಎಂ.ನಾಗಠಾಣ
ವಕೀಲರು, ಮುದ್ದೇಬಿಹಾಳ

NO. OF CORRECTIONS
L. S. METI
NOTARY
MUDDEBIHAL. DIST: VIJAYAPUR

NOTARY
L. S. METI
MUDDEBIHAL
VIJAYAPUR DISTRICT
KARNATAKA
Reg. No: 12476
Exp. Dt: 10-1-2027
GOVT. OF INDIA

SWORN BEFORE ME
L. S. METI
ADVOCATE & NOTARY GOVT. OF INDIA
MUDDEBIHAL. DIST: VIJAYAPUR.

**ದಿನಾಂಕಃ 02.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ - ಪ್ರತಿವಾದಿಯರ ಪರ ಶ್ರೀ.ವಿ.ಎಂ.ಎನ್ ವಕೀಲರಿಂದ-**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳನ್ನು ಓದಿ, ತಿಳಿದುಕೊಂಡು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ಅದರಲ್ಲಿನ ಎಲ್ಲ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ